**ಪೋನಿಟೇಲ್ ಹಾಕಿದಾಗ ಸ್ಕ್ರಂಚಿ ಧರಿಸಿದರೆ ಎದ್ದು ಕಾಣುತ್ತದೆ. ಮಹಿಳೆಯರ ಅಭಿರುಚಿಗೆ ತಕ್ಕಂತೆ, ಬಣ್ಣ, ವಿನ್ಯಾಸಕ್ಕೆ ಅನುಗುಣವಾಗಿ ಸ್ಕ್ರಂಚಿಗಳನ್ನು ಬಳಸಬಹುದು. ಕೇಶಕ್ಕೆ ಮಾತ್ರವಲ್ಲದೆ ಕೈಗಳಿಗೆ ವಾಚು, ಬ್ಯಾಂಡ್ ರೂಪದಲ್ಲೂ ಸ್ಕ್ರಂಚಿ ಸಖತ್ ಆಗಿ ಮಿಂಚುತ್ತದೆ.**



# ಸ್ಕ್ರಂಚಿ ಮಿಂಚು

■ **ಆಶಾ ಎಸ್. ಕುಲಕರ್ಣಿ**

ಮಹಿಳೆಯರ ಫ್ಯಾಷನ್ ಲೋಕ ನಿತ್ಯನೂತನ. ಅವುಗಳಲ್ಲಿ ಕೇಶಶೈಲಿಗೂ ವಿಶೇಷ ಸ್ಥಾನವಿದೆ. ನಾವು ಧರಿಸುವ ಯಾವುದೇ ಉಡುಪಿರಲಿ ಅದಕ್ಕೆ ಮ್ಯಾಚ್ ಆಗುವಂತಹ ಒಂದು ಹೇರ್‌ಸ್ಟೈಲ್ ಇದ್ದರೆ ಮುಖದ ಅಂದವೇ ಬದಲಾಗುತ್ತದೆ. ಕೆಲವೊಂದು ಕೇಶಶೈಲಿ ಎಂದಿಗೂ ಔಟ್‌ಡೇಟೆಡ್ ಆಗುವುದೇ ಇಲ್ಲ. ಇವುಗಳಲ್ಲಿ ಪ್ರಮುಖವಾಗಿ ಪೋನಿಟೇಲ್ ಒಂದು.

ಪೋನಿಟೇಲ್ ಹಲವಾರು ವರ್ಷಗಳಿಂದಲೂ ಫ್ಯಾಷನ್ ಜಗತ್ತಿನಲ್ಲಿ ಟ್ರೆಂಡ್ ಆಗಿಯೇ ಉಳಿದಿರುವ ಒಂದು ವಿಶೇಷ ಕೇಶವಿನ್ಯಾಸ. ಯಾಂತ್ರಿಕ ಜೀವನದಲ್ಲಿ ನಮಗೆ ತಕ್ಷಣಕ್ಕೆ ಮನೆಯಿಂದ ಹೊರಗೆ ಹೋಗಬೇಕಾದಾಗ ಬಹು ಬೇಗನೆ ಕೇಶವಿನ್ಯಾಸ ಮಾಡಿಕೊಳ್ಳುವ ಒಂದೇ ಒಂದು ವಿನ್ಯಾಸವೆಂದರೆ ಪೋನಿಟೇಲ್. ಇದಕ್ಕೆ ಬೇಕಾಗುವ ಸಮಯ ಕೇವಲ ಎರಡು ನಿಮಿಷ. ಕೂದಲನ್ನು ಎತ್ತಿ ಕಟ್ಟಿ ಯಾವುದಾದರೂ ಒಂದು ಹೇರ್ ಬ್ಯಾಂಡ್ ಧರಿಸಿದರೆ ಸಾಕು ಪೋನಿಟೇಲ್ ರೆಡಿ. ಈಗ ಇದನ್ನೇ ಬಂಡವಾಳವಾಗಿಸಿಕೊಂಡ ಫ್ಯಾಷನ್ ತಜ್ಞರು ಈ ಪೋನಿಟೇಲ್‌ಗೆ ಒಂದು ಸುಂದರವಾದ ಹೇರ್‌ಬ್ಯಾಂಡ್ ಅನ್ನು ವಿನ್ಯಾಸಗೊಳಿಸಿ ಹೊರತಂದಿದ್ದಾರೆ. ಅದುವೇ ಸ್ಕ್ರಂಚಿ.

ಸ್ಕ್ರಂಚಿ ಫ್ಯಾಷನ್ ಈಗ ಮುನ್ನೆಲೆಗೆ ಬಂದರೂ ಇದು ಇಂದು ನಿನ್ನೆಯದಲ್ಲ. 19ರ ದಶಕದಲ್ಲಿ ಫ್ಯಾಷನ್ ಲೋಕಕ್ಕೆ ಬಂದು ಯುವತಿಯರ ಕಣ್ಮನ ಸೆಳೆದು ಮರೆಯಾಗಿತ್ತು. ಇದೀಗ ಹೊಸ ರೂಪ ತಾಳಿ ಬಂದಿದೆ ಅಷ್ಟೆ. ಸ್ಕ್ರಂಚಿಗಳಲ್ಲಿ ಸಾಕಷ್ಟು ವೈವಿಧ್ಯವಿದೆ. ಮುಖ್ಯವಾಗಿ ಅಗಲವಾದ ಸ್ಕ್ರಂಚಿ, ಸಪೂರವಾದ ಸ್ಕ್ರಂಚಿ ಸಿಲ್ಕ್, ವೆಲ್ವೆಟ್, ಜೀನ್ಸ್, ಶರ್ಟ್ ತಯಾರಿಸುವ ದಪ್ಪ ಬಟ್ಟೆ, ಮುತ್ತುಮಣಿ ಅಳವಡಿಸಿದ ಸ್ಕ್ರಂಚಿ, ಬಣ್ಣದ ಬಟ್ಟೆಗಳಲ್ಲಿ ರೆಕ್ಕೆಯನ್ನು ಹೊಂದಿದ ಸ್ಕ್ರಂಚಿ, ಹಾಗೂ ಪುಟಾಣಿ ಮಕ್ಕಳಿಗೋಸ್ಕರ ಕಾರ್ಟೂನ್ ಸ್ಟಿಕ್ಕರ್‌ಗಳನ್ನು ಅಳವಡಿಸಿದ ಸ್ಕ್ರಂಚಿಗಳು ಈಗ ಲಭ್ಯ.

ಸ್ಕ್ರಂಚಿ ತಯಾರಿಸಲು ಹೆಚ್ಚಿನ ವಸ್ತು ಬೇಕಾಗಿಲ್ಲ. ಯಾವುದಾದರೂ ನಿಮ್ಮ ಉಡುಪಿನ ಬಟ್ಟೆ ಇದ್ದರೆ ಸಾಕು. ಅದರಲ್ಲೂ ಸಲ್ವಾರ್, ಫ್ರಾಕ್, ಬ್ಲೌಸ್, ಶರ್ಟ್‌ಗಳನ್ನು ಹೊಲಿದು ಉಳಿದ ಬಟ್ಟೆಯ ತುಂಡುಗಳು ಅಷ್ಟೆ. ಟೈಲರ್‌ಗಳಾಗಲಿ, ಮನೆಯಲ್ಲಿ ತಮ್ಮದೇ ಉಡುಪುಗಳನ್ನು ಸ್ಟಿಚ್ ಮಾಡಿಕೊಳ್ಳುವವರಾಗಲಿ ಬಟ್ಟೆ ಹೊಲಿದ ಮೇಲೆ ಉಳಿದ ತುಂಡುಗಳನ್ನು



